ವಿಧಾನ ಪರಿಷತ್ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು
ನಿಯಮ 330ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

**ಪ್ರಶ್ನೆ** **ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಹುಳಿಮಾವು ಠಾಣಾ ವ್ಯಾಪ್ತಿಯಲ್ಲಿ ಸರ್ವೇ ನಂ.27/2, 29/2, 30, 33, 35/2 ಹಾಗೂ ಇತರೆ ಬಿ.ಡಿ.ಎ. ಸ್ವತ್ತುಗಳಿಗೆ ಅನಧಿಕೃತವಾಗಿ ರೌಡಿಗಳು ದಬ್ಬಾಳಿಕೆಯಿಂದ ಬೇಲಿ ಹಾಕುತ್ತಿದ್ದಾರೆ. ನಿವೇಶನ ಪಡೆದಿರುವ ಫಲಾನುಭವಿಗಳು ಈ ಸಂಬಂಧ ಆರಕ್ಷಕ ಠಾಣೆಗೆ ದೂರು ನೀಡಲು ಹೋದರೆ ಅರ್ಜಿದಾರರನ್ನು ಪೊಲೀಸರು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹೆದರಿಸುತ್ತಾ, ದಬ್ಬಾಳಿಕೆ, ದೌರ್ಜನ್ಯವೆಸಗುತ್ತಿರುವ ರೌಡಿಗಳ ಪರವಾಗಿಯೇ ಪೊಲೀಸರು ನಿಲ್ಲುತ್ತಿದ್ದು, ದೂರಿನ ಸಂಬಂಧ ಎಫ್.ಐ.ಆರ್. ಮಾಡದೇ ಎನ್.ಸಿ.ಆರ್. ಮಾಡುತ್ತಾ, ಅಕ್ರಮ ಮಾಡುವವರಿಗೆ ಪರೋಕ್ಷವಾಗಿ ಪೊಲೀಸರೇ ಸಹಾಯ ಮಾಡುತ್ತಿರುವುದರಿಂದ ನಿವೇಶನದಾರರಿಗೆ ಸೂಕ್ತ ರಕ್ಷಣೆ ಇಲ್ಲದೆ, ತುಂಬಾ ಅನ್ಯಾಯ ಉಂಟಾಗುತ್ತಿರುವ ಗಂಭೀರ ಸಮಸ್ಯೆ ಕುರಿತು**

ಉತ್ತರ: ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಿ.ಡಿ.ಎ ಸ್ವತ್ತುಗಳಿಗೆ ಸಂಬಂದಿಸಿದಂತೆ ವಾರ್ಡ್ ನಂ.188ರ ದೇವರಚಿಕ್ಕನಹಳ್ಳಿಯ ಸರ್ವೇ ನಂ.44 ರಲ್ಲಿ ಭಾರತ ಸರ್ಕಾರದ ಅಧೀನದಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿಎ ನಿವೇಶನ 12/1 ಹಂಚಿಕೆಯಾಗಿರುತ್ತದೆ. ಸದರಿ ಸಿಎ ಸೈಟಿನ ವಿಚಾರವಾಗಿ ಈಗಾಗಲೇ ಹುಳಿಮಾವು ಪೊಲೀಸ್ ಠಾಣೆಯಲ್ಲಿ 02 ಪ್ರಕರಣಗಳು ದಾಖಲಾಗಿರುತ್ತವೆ. ಸದರಿ ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿರುತ್ತವೆ. ಪ್ರಕರಣಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಸದರಿ ಪ್ರಕರಣಗಳನ್ನು ಹೊರತುಪಡಿಸಿ ಸರ್ವೆ ನಂ. 27/2, 29/2, 30, 33, 35/2 ಹಾಗೂ ಇತರೆ ಬಿ.ಡಿ.ಎ ಸ್ವತ್ತುಗಳ ವಿಚಾರವಾಗಿ ಫಲಾನುಭವಿಗಳು ಅಥವಾ ಸಂಬಂಧಪಟ್ಟ ನಿವೇಶನದಾರರುಗಳು ಯಾವುದೇ ದೂರುಗಳನ್ನು ನೀಡಿರುವುದಿಲ್ಲ, ಈ ಸಂಬಂಧ ಎನ್‌ಸಿಆರ್‌ಗಳು/ಎಫ್‌ಐಆರ್‌ಗಳು ಹುಳಿಮಾವು ಪೊಲೀಸ್ ಠಾಣೆಯಲ್ಲಿ ವರದಿಯಾಗಿರುವುದಿಲ್ಲ, ಹುಳಿಮಾವು ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಬರುವಂತಹ ಸಾರ್ವಜನಿಕರಿಗೆ ಯಾವುದೇ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹೆದರಿಸಿ, ದಬ್ಬಾಳಿಕೆ, ದೌರ್ಜನ್ಯವನ್ನು ಎಸಗಿರುವುದಿಲ್ಲ, ರೌಡಿಗಳ ಪರವಾಗಿ ನಿಂತಿರುವುದಿಲ್ಲ, ಭಾದಿತರುಗಳು ಠಾಣೆಗೆ ಹಾಜರಾಗಿ ದೂರು ನೀಡಿದ ಕೂಡಲೇ ಸದರಿ ದೂರನ್ನು ಪರಿಶೀಲಿಸಿ ಸಂಜ್ಞೇಯ ಅಪರಾಧಕ್ಕೆ ಸಂಬಂಧಿಸಿದ್ದರೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ತನಿಖೆ ಕೈಗೊಳ್ಳಲಾಗುತ್ತಿರುತ್ತದೆ ಹಾಗೂ ಭಾದಿತರಿಗೆ ಸೂಕ್ತ ರಕ್ಷಣೆ ನೀಡಲಾಗುತ್ತಿರುತ್ತದೆ. ಅಸಂಜ್ಞೇಯ ಸ್ವರೂಪದ್ದಾಗಿದ್ದರೆ ಎನ್‌ಸಿಆರ್ ಪ್ರಕರಣಗಳನ್ನು ದಾಖಲಿಸಲಾಗುತ್ತಿರುತ್ತದೆ. ಹಾಗೂ ಸ್ವತ್ತಿನ ಮಾಲೀಕತ್ವದ ಸಿವಿಲ್ ಸ್ವರೂಪದ ದೂರುಗಳಾಗಿದ್ದಲ್ಲಿ ಪ್ರಧಾನ ಕಛೇರಿಯ ಸುತ್ತೋಲೆ ಸಂಖ್ಯೆ:ಅಪರಾಧ-3/105/2018 ದಿನಾಂಕ:14.11.2018 ರಲ್ಲಿ ನೀಡಿರುವ ಮಾರ್ಗಸೂಚಿಗಳ ಅನ್ವಯ ನಿಯಾಮಾನುಸಾರವಾಗಿ ಕಾನೂನು ರೀತ್ಯಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.

ಈ ಸ್ವತ್ತಿನ ವಿಚಾರವಾಗಿ ಈಗಾಗಲೇ ಐಟಿಸಿಎಲ್ ರವರಿಗೆ ಸೈಟ್ ಅನ್ನು ಮಂಜೂರು ಮಾಡಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. (ಪಿಟಿಷನ್ ಪಾರ್ ಸ್ಪೆಷಲ್ ಲೀವ್) ನಂ.6496/2021 ದಾವೆಯಲ್ಲಿ ಸಲ್ಲಿಸಿದ್ದು, ಆ ಮೇರೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:01.07.2021 ರಂದು "Status quo as of today shall be maintained by the parties with regard to the suit property'' ಎಂದು ಆದೇಶಿಸಿರುತ್ತದೆ. ದಿನಾಂಕ:11.08.2022 ರಂದು The order of status- quo shall continue till the next date of hearing ಎಂದು ಆದೇಶಿಸಿರುತ್ತದೆ. ಮುಂದಿನ ವಿಚಾರಣೆಯ ಸಂಭಾವ್ಯ ದಿನಾಂಕ:12.07.2023 ಆಗಿರುತ್ತದೆ.

ಹೆಚ್‌ಡಿ 306 ಎಸ್‌ಎಸ್‌ಟಿ 2023

(ಡಾ: ಜಿ.ಪರಮೇಶ್ವರ)
ಗೃಹಸಚಿವರು

# ಅನುಬಂಧ

| ಕ್ರಸ | ಪೊಲೀಸ್ ಠಾಣೆ | ಮೊ.ನಂ.ಸಂ & ಕಲಂ | ಕೃತ್ಯ ವರದಿ ದಿನಾಂಕ | ಸಂಕ್ಷಿಪ್ತ ವಿವರ | ಪಿರ್ಯಾದುದಾರರ ಹೆಸರು | ಆರೋಪಿಗಳ ಹೆಸರು | ದೋಷಾರೋಪಣಾ ಪಟ್ಟಿ ಸಲ್ಲಿಕೆ ದಿನಾಂಕ | ಸಿಸಿ ನಂಬರ್ & ವಿಚಾರಣಾ ದಿನಾಂಕ |
|---|---|---|---|---|---|---|---|---|
| 1 | ಹುಳಿಮಾವು | 39/2020 ಕಲಂ.447, 427 ಐಪಿಸಿ | 21.02.20 | ಬಿಡಿಎ ರವರು ಸ್ವಾದೀನಪಡಿಸಿಕೊಂಡು ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ರವರಿಗೆ ಹಂಚಿಕೆ ಮಾಡಿದ್ದ ಸಿ.ಎ ಸೈಟ್ ನಂ–12/1 ಕ್ಕೆ ಅತಿಕ್ರಮ ಪ್ರವೇಶ ಮಾಡಿ ತಮಗೆ ಸೇರಿದ್ದೆಂದು ಸೈಟನ್ನು ಅಗೆದು ಬೋರ್ಡ್ ಅನ್ನು ನೆಟ್ಟು ಸೈಟಿಗೆ ಹಾನಿಪಡಿಸಿರುತ್ತಾರೆ | ಶ್ರೀ.ಸತೀಶ್ ಜಿ. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1, ಬಿಡಿಎ ಕಾಂಪ್ಲೇಕ್ಸ್, ದಕ್ಷಿಣ ವಿಭಾಗ, ಬನಶಂಕರಿ, ಬೆಂಗಳೂರು ನಗರ | ಎ1.ಜಯರಾಮ ಕೆ ಬಿನ್ ಕೃಷ್ಣಪ್ಪ, 49ವರ್ಷ<br><br>ಎ2.ಸುನಿಲ್ ಕುಮಾರ್ ಬಿನ್ ಕೃಷ್ಣಪ್ಪ 34ವರ್ಷ<br><br>ಎ3. ಕೆ ಮಂಜುನಾಥ್ ರೆಡ್ಡಿ ಬಿನ್ ಲೇಟ್ ಕೃಷ್ಣ ರೆಡ್ಡಿ (ಎ3 ಆರೋಪಿಯು ತಲೆಮರೆಸಿಕೊಂಡಿರುತ್ತಾರೆ) | 29.09.20 | ಸಿಸಿ ನಂ:13712/2020 ವಿಚಾರಣಾ ದಿನಾಂಕ : 31/08/2023 |
| 2 | ಹುಳಿಮಾವು | 203/2020 ಕಲಂ.447, 427 ಐಪಿಸಿ | 30.10.20 | ಬಿಡಿಎ ರವರು ಅವರಿಗೆ ಹಂಚಿಕೆ ಮಾಡಿದ್ದ ಸಿ.ಎ ಸೈಟ್ ನಂ. ಸೈಟ್ ನಂ–12/1 ರಲ್ಲಿನ ಜಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ನಮ್ಮ ಕಂಟ್ರಾಕ್ಟರ್ ಮೆ॥ ಮಹಾ ಕನ್‌ಸ್ಟ್ರಕ್ಷನ್ ರವರು ತಿಳಿಸಿದ್ದೇನೆಂದರೆ, ದಿನಾಂಕ: 30.10.2020 ರಂದು ಸುಮಾರು 12.00 ಗಂಟೆ ಸಮಯದಲ್ಲಿ ಕೆಲವು ಅಪರಿಚಿತರು ದೊಡ್ಡ ಯಂತ್ರಗಳೊಂದಿಗೆ ಸ್ವತ್ತಿನಲ್ಲಿ ನಿರ್ಮಿಸಿದ್ದ ಶೀಟಿನ ಪೆನ್ಸಿಂಗ್ ಅನ್ನು ಕೆಡವಿ ಹಾಕಿ ಕಟ್ಟಡ ನಿರ್ಮಾಣವನ್ನು ಪ್ರಾರಂಬಿಸಿರುತ್ತಾರೆ. ಇದರಿಂದ ಸುಮಾರು 20 ಲಕ್ಷ ರೂನಷ್ಟು ನಷ್ಟಪಡಿಸಿರುತ್ತಾರೆ. ಈ ವಿಷಯದ ಬಗ್ಗೆ ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿ ನೀಡಿದ ದೂರು | ಪ್ರಶಾಂತ್ ಬಿನ್ ಪ್ರತಾಪ್, 33ವರ್ಷ, ಅಸಿಸ್ಟೆಂಟ್ ಮ್ಯಾನೇಜರ್, ಇಂಡಿಯನ್ ಆಯಿಲ್ ಕಾರ್ಪೋರೇಶನ್, ನಂ29. ಪಿ.ಕಾಳಿಂಗರಾವ್ ರಸ್ತೆ, ಅಂಜುಮಾನ್ ಕೆಆರ್ ಟವರ್ಸ್, ಮಿಶನ್ ರಸ್ತೆ, ರಿಚ್ಮಂಡ್ ವೃತ್ತ, ಬೆಂಗಳೂರು | ಎ2.ಸುನಿಲ್ ಕುಮಾರ್ ಬಿನ್ ಕೃಷ್ಣಪ್ಪ, 34ವರ್ಷ | 29.01.21 | ಸಿಸಿ ನಂ:17053/2021 ವಿಚಾರಣಾ ದಿನಾಂಕ : 07/08/2023 |